(7) ಕಂಟ್ರಾಕ್ಟ್‌ದಾರನು ಖೈದಿಗಳಿಂದ ಬೀಸಲ್ಪಡುವದಕ್ಕೆ ರಾಗಿ ಸರಬರಾಯಿ ಮಾಡಬೇಕು. ಹಾಗೆ ತಯಾರಾದ ಹಿಟ್ಟನ್ನು ಖೈದಿಗಳಿಗೆ ಕೊಡಲ್ಪಡುವದು, ಹಾಗೆ ಸರಬರಾಯಿ ಮಾಡಲ್ಪಟ್ಟಂಥಾ ಹಿಟ್ಟಿನ ವೊತ್ತಕ್ಕೆ ರಾಗಿ ಬಗ್ಯೆ ದಾಖಲಾಗಿರುವ ದರದಂತೆ ಖರೀದಿ ಕೊಡೋಣಾದೀತು.

(8) ಸೂಪರ್‌ಟೆಂಡೆಂಟರವರು ಅತ್ಯಂತ ಕಮ್ಮಿ ದರದ ಅಥವಾ ಇತರ ದರಖಾಸ್ತನ್ನು ಒಪ್ಪಿಕೊಳ್ಳುವದಕ್ಕೆ ಕಾರಣ ಹೇಳಲು ಬದ್ಧರಾಗಿರುವದಿಲ್ಲ.

(9) ಮಂಜೂರಾದ ದರಖಾಸ್ತುದಾರರ ತೇವಣಿ ವೊಬಲಗು ಇಟ್ಟುಕೊಳ್ಳಲ್ಪಡುವದು. ಮತ್ತು ಅವರ ದರಖಾಸ್ತು ಮಂಜೂರಾದ ಸಂಗತಿ ಅವರಿಗೆ ತಿಳಿಸಲಾದೀತು. ಆ ಲಾಗಾಯ್ತು ಒಂದು ವಾರದೊಳಗೆ ಅವರು ಸೂಪರ್‌ಟೆಂಡೆಂಟರವರ ಆಫೀಸಿನಲ್ಲಿ ತೋರಿಸುವ ನಮೂನೆ ಪೇರೆ ಕಂಟ್ರಾಕ್ಟು ಮುಚ್ಚಳಿಕೆ ಬರದುಕೊಡುವುದಕ್ಕೆ ತಪ್ಪಿದರೆ ಆಗಲಿ ಅಥವಾ ನಗದಾಗಲಿ ಗವರ್ನ್‌ಮೆಂಟ್ ಬಾಂಡ್ ಮೂಲಕ ಆಗಲಿ 50 ರೂಪಾಯಿಗೆ ಜಾಮೀನ್ ಕೊಡುವದಕ್ಕೆ ತಪ್ಪಿದರೆ ಅಂಥಾ ತೇವಣೀ ವೊಬಲಗು ದಂಡವಾಗಿ ತೆಗೆದುಕೊಳ್ಳಲ್ಪಡುವದು.

(10) ಜಿನಸಿಗಳನ್ನು ಒಂದು ವರ್ಷ ಪೂರ್ತಿಯಾಗಿ ಸರಬರಾಯಿ ಮಾಡತಕ್ಕ ಷರತ್ತಿಗೆ ಈ ಕಂಟ್ರಾಕ್ಟು ಬಳಪಟ್ಟರುತ್ತೆ. ಸದರೀ ವರ್ಷ ಪೂರ್ತಿಯಾಗಲೇನೆ ಸರಬರಾಯಿ ಆದ ಜಿನಸಿಗಳ ಕಿಮ್ಮತ್ತಿನ ಲೆಖ್ಖವನ್ನು ಝಾಡಿಯಾಗಿ ವ್ಯವಸ್ಥೆ ಮಾಡಲಾಗುವದು. ಈ ವುದ್ದೇ ತೊಂದರೆ ಇಲ್ಲದೆ ಸರಬರಾಯಿ ನಡಿಯುವ ಉದ್ದಿಶ್ಯ ಪ್ರತಿ ತಿಂಗಳ ಆಖೈರಿನಲ್ಲಿಯೂ ಆ ತಿಂಗಳಲ್ಲಿ ಸರಬರಾಯಿ ಮಾಡಿರುವ ಜಿನಸಿಗಳ ಬೆಲೆ ಬಾಳುವಷ್ಟು ವೊಬಲಗು ಅಡ್ವಾನ್ಸಾಗಿ ಕಂಟ್ರಾಕ್ಟುದಾರನಿಗೆ ಕೊಡಲ್ಪಡುತ್ತೆಯಾದ್ದರಿಂದ ಆ ಕಾಲಕ್ಕೆ ಸರಿಯಾಗಿ ಜೈಲು ಸೂಪರ್‌ಟೆಂಡೆಂಟರವರ ರೂಬರೂಬು ತಾನು ಸರಬರಾಯಿ ಮಾಡಿದ ಜಿನಸಿಗಳ ಕಿಮ್ಮತ್ತಿನ ಬಿಲ್ಲನ್ನು ವೌಚರ್‌ಗಳ ಸಮೇತ ಹಾಜರು ಮಾಡಿ ರಶೀತಿ ಕೊಟ್ಟು ಅಡ್ವಾನ್ಸನ್ನು ಪಡಿಯಬೇಕು.

(11) ಉಗ್ರಾಣದ ಕೊಠಡಿಗಳು ಕಂಟ್ರಾಕ್ಟುದಾರರ ಸ್ವಾಧೀನಕ್ಕೆ ಕೊಡಲ್ಪಡುವವು. ಅವುಗಳಲ್ಲಿ ಅವರು ಕೆಟ್ಟುಹೋಗದೆ ಇರತಕ್ಕ ಎಲ್ಲಾ ಜಿನಸುಗಳನ್ನು ಒಂದು ತಿಂಗಳ ಸರಬರಾಯಿಗೆ ಕಮ್ಮಿ ಇಲ್ಲದಂತೆ ಯಾವಾಗಲು ಇಟ್ಟಿರಬೇಕು. ಕೆಟ್ಟು ಹೋಗತಕ್ಕಂಥಾ ಪದಾರ್ಥಗಳು ಅಂದರೆ, ತರಕಾರಿ ಮುಂತಾದ್ದು ಪ್ರತಿದಿನವು ಬೆಳಿಗ್ಯೆ 7 ಘಂಟೆಗೆ ಸರಿಯಾಗಿ ಜೈಲ್‌ನಲ್ಲಿ ಹಾಜರ್ಮಾಡಬೇಕು.

(12) ಈ ಕಂಟ್ರಾಕ್ಟನ್ನು ಬಳಗುತ್ತಿಗೆಯಾಗಿ ಕೊಡಬಾರದು.

(13) ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮುಚ್ಚಳಿಕೆಯ ಷರತ್ತಿಗೆ ತಪ್ಪು ನಡೆದರೂ ಮತ್ತು ನಾಲಾಯಖಾದ ಸಾಮಾನನ್ನು ಸರಬರಾಯಿ ಮಾಡಿದರೂ, ಮೈಸೂರ್ ಜೈಲ್ ಸೂಪರ್‌ಟೆಂಡೆಂಟರವರು ಅವರ ಯುಕ್ತಾನುಸಾರ 50 ರೂಪಾಯಿಗೆ ವಿೂರದ ಜುಲ್ಮಾನೆ ಹಾಕುವನು. ಮತ್ತು ಪದೇಪದೆ ಆ ಮುಚ್ಚಳಿಕೆ ಷರತ್ತಿಗೆ ತಪ್ಪಿ ನಡೆದರೆ ಆ ಕಂಟ್ರಾಕ್ಟು ರದ್ದುಮಾಡಿ ತೇವಣೀ ವೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಟ್ಟೀತು.

(14) ಮುಚ್ಚಳಿಕೆ ಷರತ್ತಿಗೆ ತಪ್ಪಿ ನಡೆದ ಎಲ್ಲಾ ಪ್ರಮೇಯಗಳಲ್ಲೂ ಮೈಸೂರ್ ಜೈಲ್ ಸೂಪರ್‌ಟೆಂಡೆಂಟರವರಿಂದ ಮಾಡಲ್ಪಟ್ಟು ಫೈಸಲ್ ಆಖೈರಾಗಿರತಕ್ಕದ್ದು.

(15) ಜೈಲ್ ತೋಟದಲ್ಲಿ ಬೆಳಿಯತಕ್ಕ ತರಕಾರಿಯನ್ನು ಖೈದಿಗಳ ಉಪಯೋಗಕ್ಕಾಗಿ ತೆಗದುಕೊಳ್ಳಬೇಕೆಂತ ಅಪೇಕ್ಷಿಸಿದ ಪಕ್ಷದಲ್ಲಿ ಕಂಟ್ರಾಕ್ಟುದಾರನು ಮುಚ್ಚಳಿಕೆಯಲ್ಲಿ ನಮೂದಾಗುವ ದರದಂತೆ ತೆಗದುಕೊಳ್ಳಲು ಬದ್ಧನಾಗಿರಬೇಕು.

(16) ಈ ವಿಷಯವಾಗಿ ಇನ್ನೇನಾದರೂ ಹೆಚ್ಚು ವರ್ತಮಾನ ಅಗತ್ಯವಾದಲ್ಲಿ ಸೂಪರ್‌ಟೆಂಡೆಂಟರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

(17) ಕಂಟ್ರಾಕ್ಟುಗಳು ಮೈಸೂರು ಸಂಸ್ಥಾನದ ಜೈಲುಗಳ ಇನ್‌ಸ್ಪೆಕ್ಟರ್ ಜನರಲ್‌ರವರ ಮುಂಜೂರಾತಿಗೆ ಬಳಪಟ್ಟಿರಬೇಕು.

(18) ಕಂಟ್ರಾಕ್ಟುದಾರನು ಈ ಕಂಟ್ರಾಕ್ಟು ತೆಗದುಕೊಂಡ ತರುವಾಯ, ತಮ್ಮ ಕರಾರುಮೇರಿಗೆ ನಡೆಯಲು ಇಷ್ಟೆಟ್ಟಿಲ್ಲದಿದ್ದರೆ, ಅವನು ಕೊನೇಪಕ್ಷ ಒಂದು ತಿಂಗಳ ಮುಂಚಿತವಾಗಿ ನೋಟೀಸು ಕೊಟ್ಟು ತನ್ನ ತೇವಣಾತಿ ವೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಬಿಟ್ಟುಬಿಡಬೇಕು.

(19) ಅಲ್ಲದೆ ಆಪ್ರಕಾರ ನದರಿ ಕಂಟ್ರಾಕ್ಟುದಾರನು ತನ್ನ ಖರಾರಿಗೆ ತಪ್ಪಿದ್ದರಿಂದ ಅಥವಾ ತನ್ನ ಮುಚ್ಚಳಿಕೆಯಲ್ಲಿ ನಮೂದಾಗುವ ಪದಾರ್ಥಗಳನ್ನು ಸರ್ಕಾರದವರು, ಸ್ಥಳೀಯವಾದ ಬಜಾರಿನಲ್ಲಿ ಮುಚ್ಚಳಿಕೆ ದರಕ್ಕಿಂತಲೂ ಹೆಚ್ಚು ದರ ಕೊಟ್ಟು ತಕ್ಕೊಳ್ಳುವದ್ದರಿಂದ ಸರ್ಕಾರಕ್ಕೆ ಉಂಟಾಗಬಹುದಾದ ನಷ್ಟವನ್ನು ಭರ್ತಿ ಮಾಡುವದಕ್ಕೂ ಸಹ ಬದ್ಧನಾಗಿರಬೇಕು.

ಷರಾ.—ಈ ಕಂಟ್ರಾಕ್ಟಿನಲ್ಲಿ ಯಾವ ವಿಧವಾದ ರಿಯಾಯತಿಯನ್ನು ಮಾಡೋಣಾಗಲಾರದು.

ಟಿ. ಎಸ್. ನಂಜಪ್ಪ, ಸೂಪರ್‌ಟೆಂಡೆಂಟ್.

ಮೈಸೂರು ಗವರ್ನಮೆಂಟು ಕೋ ಆಪರೇಟೀವ್ ಸೊಸೈಟಿಗಳ ರಿಜಿಸ್ಟ್ರಾರ್‌ರವರ ಆಫೀಸಿನಿಂದ.

ನೋಟಿಫಿಕೇಷನ್ ನಂಬರ್ 812—C. S.-24.

ಮೊಕ್ಕಾಂ ಬೆಂಗಳೂರು, ತಾರೀಖು 25—26ನೆ ಮೇ 1909.

ಈ ಕೆಳಗೆ ನಮೂದಿಸಿರುವ ಕೋ ಆಪರೇಟೀವ್ ಸೊಸೈಟಿಗಳು 1905ನೆ ಇಸವಿಯ ಮೈಸೂರು ಕೋ ಆಪರೇಟೀವ್ ಸೊಸೈಟಿಗಳ ರೆಗ್ಯುಲೇಷನ್ 6ನೆ ಸೆಕ್ಷನ್ 2ನೆ ಒಳ ಪ್ರಕರಣಕ್ಕನುಸಾರವಾಗಿ ರಿಜಿಸ್ಟರು ಮಾಡಲ್ಪಟ್ಟಿರುತ್ತವೆ :—

ಹೆಸರು.	ಸ್ಥಳ.	ರಿಜಿಸ್ಟರಾದ ತಾರೀಖು.
1. ಚನ್ನಪಟ್ಟಣ ಕೋ ಆಪರೇಟೀವ್ ಸೊಸೈಟಿ ಲಿಮಿಟೆಡ್.	ಚನ್ನಪಟ್ಟಣ ...	4ನೆ ಮೇ 1909.
2. ತುರುವೇಕೆರೆ ಕೋ ಆಪರೇಟೀವ್ ಸೊಸೈಟಿ ಲಿಮಿಟೆಡ್.	ತುರುವೇಕೆರೆ ...	7ನೆ ಮೇ 1909.

ಎಂ. ಶಾಮರಾವ್, ಮೈಸೂರು ಗವರ್ನಮೆಂಟ್ ಕೋ ಆಪರೇಟೀವ್ ಸೊಸೈಟಿಗಳ ರಿಜಿಸ್ಟ್ರಾರ್.